O.S .No. 161/2012
PW-1

ದಿನಾಂಕ: 05-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದಃ</u>**

ನನ್ನ ತಂದೆಯ ಹೆಸರು ನಾರಾಯಣಗೌಡ. ಅವರ ತಂದೆಯ ಹೆಸರು ಮಾದೇಗೌಡ. ನನ್ನ ತಂದೆ ಹಾಗೂ ತಾತ ಮೃತಪಟ್ಟಿರುತ್ತಾರೆ. ನನ್ನ ತಾಯಿ ಈಗ್ಗೆ 10-15 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಮತ್ತು ತಾಯಿಯ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನೀವು ನಾರಾಯಣಗೌಡರ ಮಗಳು ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಏನು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ನನ್ನ ತಂದೆ-ತಾಯಿಗೆ ನಾವು ಮೂರು ಜನ ಮಕ್ಕಳು. ಅವರಲ್ಲಿ ಒಬ್ಬಳು ಮೃತಪಟ್ಟಿರುತ್ತಾಳೆ. ನನ್ನ ಅಕ್ಕಳನ್ನು ಹಿರಿಕ್ಯಾತನಹಳ್ಳಿಯ ನನ್ನ ಸೋದರಮಾವನಿಗೆ ಮದುವೆ ಮಾಡಿ ಕೊಡಲಾಗಿತ್ತು. ನನ್ನ ಸೋದರಮಾವ ಮತ್ತು ಅಕ್ಕನಿಗೆ ಪವಿತ್ರಾ ಮತ್ತು ಗೀತಾ ಎಂಬ ಇಬ್ಬರು ಮಕ್ಕಳು. ಸದರಿ ಪವಿತ್ರಾ ಮತ್ತು ಗೀತಾ ರವರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ. ದಾವೆ ಹೂಡುವ ಕಾಲಕ್ಕೆ ನಿಮ್ಮ ವಕೀಲರಿಗೆ ನಿಮ್ಮ ಅಕ್ಕನಿಗೆ ಇಬ್ಬರು ಮಕ್ಕಳಿರುವ ಬಗ್ಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇ ಎಂದು ಹೇಳುತ್ತಾರೆ.ನನ್ನ ಸೋದರಮಾವ ನನ್ನ ಅಕ್ಕಳನ್ನು ಮದುವೆಯಾಗಿ ನನ್ನ ಅಕ್ಕಳೊಂದಿಗೆ ಹಿರಿಕ್ಯಾತನಹಳ್ಳಿಯಿಂದ ರಾಯನಹಳ್ಳಿಗೆ ಬಂದು ನೆಲೆಸಿರುತ್ತಾರೆ. ನಿಮ್ಮ ಅಕ್ಕ ಹಾಗೂ ಸೋದರಮಾವ ಹಿರಿಕ್ಯಾತನಹಳ್ಳಿಯಿಂದ ಬಂದು ರಾಯನಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿ ಮಾದೇಗೌಡರಿಗೆ ಸೇರಿದ್ದು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡೆಸುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆಗೆ ಸೇರಿದ ರಾಯನಹಳ್ಳಿ ಗ್ರಾಮದಲ್ಲಿ ಮನೆ ಇದೆ. ಸದರಿ ಮನೆಯನ್ನು ದಾವೆಯಲ್ಲಿ

ಸೇರಿಸಿದ್ದೀರಾ ಎಂದರೆ ಸಾಕ್ಷಿ ಸೇರಿಸಿರಬೇಕು, ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸದರಿ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ.

ದಾವಾ ಆಸ್ತಿಯ ಸ್ವಾಧೀನದಲ್ಲಿ ನಿಮ್ಮ ತಂದೆ ಇದ್ದರು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರಬೇಕು ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಹೆದರಿಸಿ, ಬೆದರಿಸಿ ಮಾವನಿಂದ ಅವರ ಹೆಸರಿಗೆ ಮಾಡಿಸಿಕೊಂಡರು ಎಂದು ಹೇಳಿದ್ದು, ಸದರಿ ವಿಚಾರ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ 20-25 ವರ್ಷಗಳ ಹಿಂದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ನಮ್ಮ ತಂದೆಗೆ ಹೊಡಿ ಬಡಿ ಮಾಡಿದ ವಿಚಾರ ನಮಗೆ ಗೊತ್ತಾಗಿರುತ್ತದೆ. ನಿಮಗೆ ಗೊತ್ತಾದ ನಂತರ ನಿವೇನಾದರೂ ಭಾಗ ಕೊಡುವಂತೆ ಕೋರಿದ್ದೀರಾ ಎಂದರೆ ಸಾಕ್ಷಿ ಕೊಡುವುದಿಲ್ಲ ಎಂದು ಹೇಳಿದರು ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಭಾಗ ಕೊಡುವುದಿಲ್ಲ ಎಂದು ಹೇಳಿದಾಗ ನ್ಯಾಯಾಲಯಕ್ಕೆ ದಾವೆ ಹೂಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಿಮ್ಮ ತಂದೆಗೆ 2 ನೇ ಪ್ರತಿವಾದಿ ಹೊಡಿ, ಬಡಿ ಮಾಡಿದ ಬಗ್ಗೆ ನಿಮ್ಮ ತಂದೆ 2 ನೇ ಪ್ರತಿವಾದಿಯ ವಿರುದ್ಧ ದೂರು ನೀಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನನ್ನನ್ನು ಉಂಡವಾಡಿ ಗ್ರಾಮದ ದೇವರಸೇಗೌಡ ರವರಿಗೆ ಮದುವೆ ಮಾಡಿ ಕೊಡಲಾಗಿದೆ. ಮದುವೆಯಾದಾಗಿನಿಂದ ನಾನು ನನ್ನ ಗಂಡನ ಊರಾದ ಉಂಡವಾಡಿ ಗ್ರಾಮದಲ್ಲೇ ವಾಸ ಇದ್ದೇನೆ. ನಿಮ್ಮ ಅಮ್ಮ, ಅಕ್ಕ ಹಾಗೂ ತಂದೆ ಪ್ರತ್ಯೇಕವಾಗಿ ಬೇರೆ ಬೇರೆ ವಾಸ ಇದ್ದರು ಎಂದರೆ ಸರಿ. ನೀವು, 2 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿ ವಾಸ ಇರುವ ಬಗ್ಗೆ ಏನು ದಾಖಲಾತಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವು ಹಾಗೂ ಅಂಕೇಗೌಡರು ಒಟ್ಟಾಗಿ ಸ್ವಾಧೀನ ಇರುವ ಬಗ್ಗೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದೆ ಎಂದು ಹೇಳುತ್ತಾರೆ.

2 ನೇ ಪ್ರತಿವಾದಿ ಮನೆಯ ಯಜಮಾನಿಕೆ ಮಾಡುತ್ತಿದ್ದು, ಒಟ್ಟು ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಎಂಬ ಬಗ್ಗೆ ಏನು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಮನೆಯ ಯಜಮಾನಿಕೆ

ಮಾಡುತ್ತಿದ್ದರು ಎಂದು ತೋರಿಸಲು ಸಾಕ್ಷಿ ಇದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿ ತೆಂಗಿನ ತೋಟವಾಗಿರುತ್ತದೆ. ದಾವಾ ಆಸ್ತಿಯಿಂದ ಒಟ್ಟು ಎಷ್ಟು ಆದಾಯ ಬರುತ್ತಿತ್ತು ಎಂದರೆ ಸಾಕ್ಷಿ ಜಮೀನು ಮಾಡಿದಂತೆ ಬರುತ್ತಿತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಭಾಗ ಬರಬೇಕೆಂದು ನ್ಯಾಯ ಪಂಚಾಯಿತಿ ಮಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನನ್ನ ದೊಡ್ಡಪ್ಪನ ಹೆಸರು ತಿಮ್ಮರಾಯಗೌಡ. ಸದರಿಯವರ ಮೊಮ್ಮಕ್ಕಳು ಬದುಕಿದ್ದಾರೆ. ಅವರು ನೀವು ಎಲ್ಲರೂ ಚೆನ್ನಾಗಿದ್ದೀರಿ ಎಂದರೆ ಸರಿ.

2 ನೇ ಪ್ರತಿವಾದಿ ನಿಮ್ಮ ತಂದೆಯಿಂದ ಆಸ್ತಿಯನ್ನು ಖಾತೆ ಮಾಡಿಸಿಕೊಂಡ ಬಗ್ಗೆ ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಪಹಣಿ ಪತ್ರಿಕೆಗಳನ್ನು 2 ನೇ ಪ್ರತಿವಾದಿ ಸೃಷ್ಟಿಮಾಡಿಕೊಂಡಿದ್ದಾರೆಂಬ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಅಥವಾ ದೂರನ್ನೇನಾದರೂ ದಾಖಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆಯನ್ನು ನಿಮ್ಮ ತಾಯಿ ಮೃತ ನಿಂಗಮ್ಮ ರವರ ವಿರುದ್ಧ ಹೂಡಿದ್ದೀರಿ ಎಂದರೆ ಸರಿ.

2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ಸಂ.2 ನ್ನು 2011 ರಲ್ಲೇ ಮಾರಾಟ ಮಾಡಿರುತ್ತಾರೆಂದರೆ ಸರಿ. ದಾವಾ ತಪಶೀಲು ಆಸ್ತಿ ಸಂ.2, 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ತಾತನ ಆಸ್ತಿ ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.2 ನ್ನು ದಿಃ21.09.1977 ರಲ್ಲಿ 2 ನೇ ಪ್ರತಿವಾದಿ ನಾರಾಯಣಗೌಡ ಬಿನ್ ಮಾದೇಗೌಡ ರವರಿಂದ ಶುದ್ಧ ಕ್ರಯಕ್ಕೆ ಖರೀದಿಸಿರುತ್ತಾರೆಂದರೆ ಸರಿಯಲ್ಲ. 2 ನೇ ಪ್ರತಿವಾದಿ 1977 ರಿಂದ ದಾವಾ ತಪಶೀಲು ಆಸ್ತಿ ಸಂ.2 ನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು 2011 ರವರೆಗೆ ಅನುಭವ ಹೊಂದಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ಮೋಸ ಮಾಡಿ ಖಾತೆ ಮಾಡಿಸಿಕೊಂಡಿರುತ್ತಾರೆಂಬ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ

ತಪಶೀಲು ಆಸ್ತಿ ಸಂ.2, 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದನ್ನು ಮಾರಾಟ ಮಾಡಲು, 2 ನೇ ಪ್ರತಿವಾದಿಗೆ ಸ್ವತಂತ್ರ ಹಕ್ಕಿದೆ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ಸಂ.2 ಕ್ಕೂ ಹಾಗೂ ನಿಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ದಿಃ06.07.2011 ರಂದು 2 ನೇ ಪ್ರತಿವಾದಿ ದಾವಾ ತಪಶೀಲು ಆಸ್ತಿ ಸಂ.2 ನ್ನು ಮಾರಾಟ ಮಾಡಿದ್ದು, ಅಂದಿನಿಂದ ಅವರೇ ಸದರಿ ಆಸ್ತಿಯ ಖಾತೆ ಮಾಡಿಸಿಕೊಂಡು, ಸ್ವಾ ಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಿಃ30.11.2012 ರಂದು 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ಸಂ.2 ರ 2 ಎಕರೆ 12 ಗುಂಟೆ ಪೈಕಿ 2 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2012 ರಿಂದ 4 ನೇ ಪ್ರತಿವಾದಿ ಕ್ರಯ ಪತ್ರದಂತೆ ಕಂದಾಯ ದಾಖಲಾತಿಗಳನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ಅನುಭವ ಮಾಡುತ್ತಿದ್ದಾರೆಂದರೆ ಸಾಕ್ಷಿ ಮೋಸ ಮಾಡಿದ್ದಾರೆ ಎಂದು ಹೇಳುತ್ತಾರೆ. ಮೃತ 1 ನೇ ಪ್ರತಿವಾದಿ ಬದುಕಿದ್ದಾಗ, ನೀವು ಹಾಗೂ 1 ನೇ ಪ್ರತಿವಾದಿ ಚೆನ್ನಾಗಿದ್ದೀರಿ ಎಂದರೆ ಸರಿ. 1 ನೇ ಪ್ರತಿವಾದಿ ಬದುಕಿದ್ದಾಗ ದಾವಾ ತಪಶೀಲು ಆಸ್ತಿ ಸಂ.2 ನ್ನು 2 ನೇ ಪ್ರತಿವಾದಿ, 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಮತ್ತು 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿ 2 ನೇ ಪ್ರತಿವಾದಿ ನೋಡಿಕೊಂಡು ಮಾಡುತ್ತಾನೆ ಸುಮ್ಮನಿರು ಎಂದು 1 ನೇ ಪ್ರತಿವಾದಿ ಹೇಳುತ್ತಿದ್ದರು ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ವಕೀಲರು ಬರೆದುಕೊಳ್ಳುವುದಾಗಿ ಹೇಳಿ ಬರೆದಿದ್ದರು, ಎನು ಗೊತ್ತಿಲ್ಲ ಎಂದು ಹೇಳುತ್ತಾರೆ.

ನಿಪಿ-10 ರಂತೆ ಕ್ರಯ ಪತ್ರವನ್ನು 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಎಲ್ಲರೂ ಸೇರಿ 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ಕುಟುಂಬದ ಕಾನೂನು ಬದ್ಧ ಅವಶ್ಯಕತೆಗಾಗಿ 3 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ಸಂ.2 ನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಮೋಸ ಮಾಡಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.2, 2 ನೇ ಪ್ರತಿವಾದಿಗೆ ಸೇರಿದ್ದು, ಅನ್ಯಪಾಯಿದೆ ಹೊಂದುವ ಉದ್ದೇಶದಿಂದ ದಾವೆಯಲ್ಲಿ ಸುಳ್ಳಾಗಿ ಸೇರ್ಪಡೆ

ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು, ಮೃತ 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿ ಎಲ್ಲರೂ ಸೇರಿ ಷರಿಕಾಗಿ 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.